**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ತಿ. ನರಸೀಪುರ.**

ಸಿಸಿ ಸಂಖ್ಯೆ:199/2020. ಚಾ.ಸಾ–5. ಪ್ರಾ.ಸಾ–5.

| | | |
|---|---|---|
| ಹೆಸರು | : | ಶ್ರೀ ಅಜರುದ್ದೀನ್ |
| ತಂದೆಯ ಹೆಸರು | : | ಇಲಿಯಾಸುದ್ದೀನ್ |
| ವಯಸ್ಸು | : | 40 |
| ವೃತ್ತಿ | : | ಆರಕ್ಷಕ ನಿರೀಕ್ಷಕರು, ಚೆಸ್ಕಾಂ ಘಟಕ, ಚಾಮರಾಜನಗರ |
| ವಾಸ | : | ಚಾಮರಾಜನಗರ. |

ದಿನಾಂಕಃ 28–06–2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿಃ10–09–2018 ರಿಂದ 24–02–2019 ರವರೆಗೆ ತಿ. ನರಸೀಪುರದ ಪೊಲೀಸ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿಃ04–01–2019 ರಂದು ಮಧ್ಯಾಹ್ನ 12.15 ಘಂಟೆಗೆ ನಾನು ಠಾಣಾದಿಕಾರಿಯಾಗಿದ್ದಾಗ ಫ್ರಾಸಾ 2 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿದ್ದರು. ಅದನ್ನು ಸ್ವೀಕರಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ.

ಆ ದೂರು ಈಗಾಗಲೇ ನಿ.ಪಿ.1 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

ಆ ದೂರಿನ ಮೇಲೆ ಅಪರಾಧ ಸಂಖ್ಯೆ 5/2019 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ

ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ. 3 ಮತ್ತು 3(ಎ) ಎಂದು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಫ್ರಾಸಾ 2 ರವರು ತೋರಿಸಿದಂತೆ ಫ್ರಾಸಾ 3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 1 ರಿಂದ 1.45 ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ.

ಆ ಪಂಚನಾಮ ಈಗಾಗಲೇ ನಿ.ಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತನನ್ನು ದಸ್ತಗಿರಿ ಮಾಡಿ ಹಾಜರುಪಡಿಸುವಂತೆ ಠಾಣಾ ಸಿಬ್ಬಂದಿಗಳಾದ ಮಂಚಯ್ಯ ಮತ್ತು ಪಚ್ಚೇಗೌಡರವರನ್ನು ಮೌಖಿಕವಾಗಿ ನೇಮಿಸಿರುತ್ತೇನೆ. ಅವರು ಆರೋಪಿತನನ್ನು ದಸ್ತಗಿರಿ ಮಾಡಿ ಅದೇ ದಿನ ಮಧ್ಯಾಹ್ನ 3.15 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆತನನ್ನು ವಿಚಾರಿಸಿ, ಆತ ತನ್ನ ತಪ್ಪನ್ನು ಒಪ್ಪಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕಾಗಿ ನ್ಯಾಯಾಲಯದ ಮುಂದೆ ಹಾಜುರಪಡಿಸಿರುತ್ತೇನೆ.

ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆತನನ್ನು ಗುರುತಿಸುವವಿಕೆಯ ಬಗ್ಗೆ ಆತನ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ಅದೇ ದಿನ ಫ್ರಾಸಾ 1, 3 ಮತ್ತು 4 ರವರ ಹೇಳಿಕೆಗಳನ್ನು ಮತ್ತು ಫ್ರಾಸಾ 2 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ14-02-2019 ರಂದು ಫ್ರಾಸಾ 2 ರವರ ಗಾಯ ಪ್ರಮಾಣ ಪತ್ರವನ್ನು ತಿ.ನರಸೀಪುರದ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ. 4 ಮತ್ತು 4(ಎ) ಎಂದು ಗುರುತಿಸಲಾಯಿತು.

ಫ್ರಾಸಾ 2 ರವರನ್ನು ಪೌರ ಕಾರ್ಮಿಕ ಎಂದು ನೇಮಿಸಿರುವ ಬಗ್ಗೆ ತಿ. ನರಸೀಪುರದ ಪುರಸಭೆಯಿಂದ ಆದೇಶದ ಪ್ರತಿಗಳು ಮತ್ತು ಪತ್ರವನ್ನು ಪಡೆದುಕೊಂಡಿರುತ್ತೇನೆ. ಆ ಪತ್ರ ಮತ್ತು ಆದೇಶದ ಪ್ರತಿಗಳನ್ನು ಮತ್ತು ಅವುಗಳಲ್ಲಿರುವ ನನ್ನ ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.5 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿ.ಪಿ.5(ಎ) ಯಿಂದ 7(ಎ) ಎಂದು ಗುರುತಿಸಲಾಯಿತು.

ತನಿಖೆಯು ಪೂರ್ಣಗೊಂಡ ನಂತರ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ವಿ ಕೆ ವಕೀಲರಿಂದ – ಆರೋಪಿತನ ಪರ</u>**

ಘಟನೆಯ ಬಗ್ಗೆ ಯಾರು ಮಾಹಿತಿ ನೀಡಿದ್ದಾರೆಂದರೆ ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಯಿಂದ ನನಗೆ ಮಾಹಿತಿ ಬಂದಿತ್ತು.

ಘಟನಾ ಸ್ಥಳಕ್ಕೆ ಪಂಚನಾಮ ಮಾಡುವ ವೇಳೆಗೆ ಹೋಗಿದ್ದೆನು. ಆ ವೇಳೆಗೆ ಅಲ್ಲಿ ಯಾರು ಇದ್ದರು ಎಂದರೆ ಯಾರು ಇರಲಿಲ್ಲ, ನಾನು ಅಲ್ಲಿಗೆ ಹೋದಾಗ ಫ್ರಾಸಾ 2 ರಿಂದ 4 ರವರು ನನ್ನೊಂದಿಗೆ ಬಂದರು.

ಘಟನೆಯು ಆರೋಪಿತನ ಮನೆಯ ಮುಂದೆ ಆಗಿರುತ್ತದೆ. ಆತನ ಮನೆಯಲ್ಲಿ ಅವರ ತಂದೆ ತಾಯಿ ವಾಸವಾಗಿದ್ದಾರೆ ಎಂದರೆ ಸರಿ.

ಫ್ರಾಸಾ 2 ರವರಿಗೆ ಮಾತ್ರ ಹಲ್ಲೆ ಮಾಡಲಾಗಿದೆ ಎಂದು ದೂರನ್ನು ಅವರು ನೀಡಿದ್ದರು ಎಂದರೆ ಸರಿ. ಘಟನೆ ನಡೆದಾಗ ಫ್ರಾಸಾ 3 ಮತ್ತು 4 ರವರು ಇದ್ದರು ಎಂದು ಫ್ರಾಸಾ 2 ರವರಿಂದ ತಿಳಿದುಕೊಂಡೆನು. ಫ್ರಾಸಾ 2 ರಿಂದ 4 ರವರು ಕೆಲಸ ಮಾಡುವಾಗ ಘಟನೆ ಆಗಿದೆ.

ಫ್ರಾಸಾ 2 ರವರು ಠಾಣೆಗೆ ಬಂದಾಗ ಆರೋಪಿತನು ಕೂಡಾ ದೂರನ್ನು ಕೊಡಲು ಬಂದಿದ್ದು, ನಾನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಪುರಸಭೆಯ ಅಧಿಕಾರಿಗಳ ಪ್ರಭಾವದಿಂದ ಆರೋಪಿತನ ವಿರುದ್ಧ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಘಟನೆಯ ನಂತರ ಆರೋಪಿತ ತಪ್ಪಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ತಪ್ಪು ಮಾಡಿರಲಿಲ್ಲದಿದ್ದರೂ ಕೂಡಾ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 7 ರ ದಾಖಲೆಗಳನ್ನು ನಾನು ಮತ್ತು ಸದರಿ ಪುರಸಭೆ ಅಧಿಕಾರಿಗಳು ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**